# ಆದಿವಾಸಿ ಸಮುದಾಯದ ಹಕ್ಕುಗಳ ಸಂರಕ್ಷಣೆಗಾಗಿ

CPI(M)

## ಸಿಪಿಐ(ಎಂ)ಗೆ ಮತ ನೀಡಿ

## ಎಡಪಕ್ಷಗಳನ್ನು ಬಲಪಡಿಸಿ

: ಪ್ರಕಟಣೆ :

**ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)**

ಕರ್ನಾಟಕ ರಾಜ್ಯ ಸಮಿತಿ

ಸಿಪಿಐ(ಎಂ) ಆದಿವಾಸಿ ಸಮುದಾಯದ ಹಕ್ಕುಗಳ ರಕ್ಷಣೆಗಾಗಿ ಹೋರಾಟ ನಡೆಸಲು ಬದ್ಧವಾಗಿದೆ. ಸಿಪಿಐ(ಎಂ) ಮತ್ತು ಎಡಪಕ್ಷಗಳು ಬುಡಕಟ್ಟು ಸಮುದಾಯದ ಬೇಡಿಕೆಗಳ ಈಡೇರಿಕೆಗಾಗಿ ಕಳೆದ 5 ವರ್ಷಗಳಿಂದ ಸಂಸತ್ತಿನ ಒಳಗೆ ಮತ್ತು ಹೊರಗೆ ನಿರಂತರವಾಗಿ ಹೋರಾಟ ನಡೆಸುತ್ತಿದೆ. ಕಾಂಗ್ರೆಸ್ ಮತ್ತು ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರಗಳು ಬುಡಕಟ್ಟು ಜನರ ಹಕ್ಕುಗಳಿಗೆ ಬೆದರಿಕೆಯೊಡ್ಡಿರುವ ಈ ಸಂದರ್ಭದಲ್ಲಿ ಸಿಪಿಐ(ಎಂ) ಇವರ ಹಕ್ಕುಗಳ ರಕ್ಷಣೆಗಾಗಿ ಹಲವಾರು ಹೋರಾಟಗಳನ್ನು ನಡೆಸಿದೆ.

ಆರ್ಥಿಕ ದಾಳಿಗಳು ನಡೆಯುತ್ತಿರುವ ಈ ಸಂದರ್ಭದಲ್ಲಿ ಆದಿವಾಸಿ ಜನರು ನೆಲೆಸಿರುವ ಪ್ರದೇಶಗಳಲ್ಲಿ ಯಾವುದೇ ಯೋಜನೆಯ ಬಗ್ಗೆ ಸಮಾಲೋಚನೆ ನಡೆಸಬೇಕೆಂಬ ಅವರ ಪ್ರಜಾಸತ್ತಾತ್ಮಕ ಹಕ್ಕನ್ನು ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಪಕ್ಷಗಳು ಬಹಿರಂಗವಾಗಿಯೇ ಉಲ್ಲಂಘಿಸಿವೆ, ಬುಡಕಟ್ಟು ಸಮುದಾಯಗಳ ಗ್ರಾಮ ಸಭೆಗಳ ಮೂಲಕ ಒಪ್ಪಿಗೆ ಪಡೆಯುವ ಪ್ರಶ್ನೆಯನ್ನು ಸಮಾಧಿ ಮಾಡಿವೆ.

ಬುಡಕಟ್ಟು ಭಾಷೆಗಳು ಮತ್ತು ಸಂಸ್ಕೃತಿಗೆ ಮಾನ್ಯತೆ ಮತ್ತು ಬೆಂಬಲವನ್ನು ನಿರಾಕರಿಸಲಾಗಿದೆ. ಸಂವಿಧಾನದ 8ನೇ ಶೆಡ್ಯೂಲ್ ಅಡಿಯಲ್ಲಿ ಬುಡಕಟ್ಟು ಭಾಷೆಗಳಿಗೆ 'ಮಾನ್ಯತೆಯ ರಾಜ್ಯ ಸರ್ಕಾರಗಳಿಂದ ಮಾನ್ಯತೆಯ ಗಂಭೀರ ವಿಚಾರವನ್ನು ಕಡೆಗಣಿಸಲಾಗಿದೆ.

ಇಂತಹ ಸನ್ನಿವೇಶದಲ್ಲಿ ತ್ರಿಪುರಾದಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರ ಒಂದು ಪ್ರಜಾಸತ್ತಾತ್ಮಕ ಮತ್ತು ಪ್ರಗತಿಪರ ಆದಿವಾಸಿ ಪರವಾದ 'ಪರ್ಯಾಯ'ದ ಸಾಧ್ಯತೆಯನ್ನು ತೋರಿಸಿ ಕೊಟ್ಟಿದೆ. ಶೇ.30ರಷ್ಟು ಆದಿವಾಸಿ ಜನಸಂಖ್ಯೆಯಿರುವ ತ್ರಿಪುರ ರಾಜ್ಯವೊಂದರಲ್ಲಿ ಮಾತ್ರ, ಎಡರಂಗದ ಸರ್ಕಾರದ ಅಡಿಯಲ್ಲಿ ಆದಿವಾಸಿ ಜನರಿಗೆ ಕಾನೂನಿನ ಚೌಕಟ್ಟನ್ನು ರಕ್ಷಿಸಲಾಗಿದೆ ಮತ್ತು ಬಲಪಡಿಸಲಾಗಿದೆ. ಬುಡಕಟ್ಟು

ಜನರಾಡುವ 'ಕೊಕ್ ಬೊರೊಕ್' ಭಾಷೆಗೆ ಮಾನ್ಯತೆ ಕೊಡಲಾಗಿದೆ, ಅದನ್ನು ಪ್ರೋತ್ಸಾಹಿಸಲಾಗಿದೆ. ಅರಣ್ಯ ಹಕ್ಕುಗಳ ಕಾಯಿದೆಯನ್ನು ಮತ್ತು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಅದು ಅತ್ಯುತ್ತಮವಾದ ದಾಖಲೆ ನಿರ್ಮಿಸಿದೆ. ಆದಿವಾಸಿ ಪ್ರದೇಶಗಳಲ್ಲಿ ವರ್ಷಕ್ಕೆ 90 ದಿನಗಳ ಉದ್ಯೋಗ ಖಾತ್ರಿ ಒದಗಿಸಿರುವುದು ಇಡಿ ದೇಶದಲ್ಲಿಯೇ ದಾಖಲೆ ಸೃಷ್ಟಿಸಿದೆ. 6ನೇ ಶೆಡ್ಯೂಲ್‌ನ್ನು ಸರಿಯಾಗಿ ಜಾರಿಗೊಳಿಸಿ ಸ್ವಾಯತ್ತತೆಯನ್ನು ಮತ್ತು ಅಧಿಕಾರದ ವಿಕೇಂದ್ರೀಕರಣವನ್ನು ಬಲಗೊಳಿಸಲಾಗಿದೆ; ಆರನೇ ಶೆಡ್ಯೂಲಿನ ಪ್ರದೇಶಗಳಲ್ಲೆಲ್ಲ ಚುನಾಯಿತ ಗ್ರಾಮ ಸಮಿತಿಗಳನ್ನು ರಚನೆ ಮಾಡಲಾಗಿದೆ; ಬುಡಕಟ್ಟು ಜನರು ಹೊಂದಿರುವ ಜಮೀನಿನ ಅಭಿವೃದ್ಧಿಗೆ ನೆರವು, ಇತ್ಯಾದಿ ನೀಡಲಾಗಿದೆ. ಇದರ ಫಲವಾಗಿ ಆ ರಾಜ್ಯದಲ್ಲಿನ ಆದಿವಾಸಿ ಸಮುದಾಯ ದೇಶದಲ್ಲೇ ಅತ್ಯುನ್ನತ ಅಭಿವೃದ್ಧಿ ಮಟ್ಟಗಳನ್ನು ಸಾಧಿಸಿದೆ.

ಆದಿವಾಸಿ ಸಮುದಾಯದ ಜನಗಳ ಜೀವನ, ಅವರ ಜೀವನಾಧಾರ ಮತ್ತು ಸಂಸ್ಕೃತಿಗಳ ಮೇಲೆ ನಡೆಯುತ್ತಿರುವ ಕ್ರೂರವಾದ ದಾಳಿಗಳನ್ನು ಎದುರಿಸಲು, ಈ ಸಮುದಾಯದ ನಡುವೆ ಐಕ್ಯತೆಯನ್ನು ಮೂಡಿಸಬೇಕಾಗಿರುವುದು ಅತ್ಯವಶ್ಯವಾಗಿದೆ. ಆರ್.ಎಸ್.ಎಸ್. ತಮ್ಮ ಹಲವು ಅಂಗ ಸಂಘಟನೆಗಳ ಮೂಲಕ ಆದಿವಾಸಿ ಜನರ ನಡುವೆ ಸಕ್ರಿಯವಾಗಿದೆ. ಅದರ ಪ್ರಧಾನ ಉದ್ದೇಶ ಆದಿವಾಸಿ ಸಮುದಾಯಗಳನ್ನು 'ಹಿಂದೂಕರಣ' ಮಾಡುವುದು ಮತ್ತು ಧರ್ಮದ ಹೆಸರಿನಲ್ಲಿ ಒಡಕು ಸೃಷ್ಟಿಸುವುದು. ಇದು ಆದಿವಾಸಿಗಳ ಪ್ರತಿರೋಧ ಚಳುವಳಿಯನ್ನು ಬಲಹೀನಗೊಳಿಸುತ್ತದೆ ಮತ್ತು ಕಾರ್ಪೊರೇಟ್‌ಗಳ ಹಿತಾಸಕ್ತಿಗಳಿಗೆ ಸಹಾಯ ಮಾಡುತ್ತದೆ.

ಅದೇ ವೇಳೆಗೆ, ಹಲವು ರಾಜ್ಯಗಳಲ್ಲಿ ಮಾವೋವಾದಿ ಹಿಂಸಾಚಾರ ಆದಿವಾಸಿ ಸಮುದಾಯಗಳಿಗೆ ಒಂದು ತುಂಬ ಕ್ಲಿಷ್ಟಕರ ಪರಿಸ್ಥಿತಿಯನ್ನು ನಿರ್ಮಿಸಿದೆ; ಒಂದು ಕಡೆ ರಾಜ್ಯ ಸರ್ಕಾರಗಳ ಮತ್ತು ಸಶಸ್ತ್ರ ಪಡೆಗಳ ದಮನಕಾರಿ ಧೋರಣೆಗಳು, ಮತ್ತು ಮತ್ತೊಂದು ಕಡೆ ಮಾವೋವಾದಿಗಳು ಇವರ ನಡುವೆ ಅವರು ಸಿಲುಕಿಕೊಂಡಿದ್ದಾರೆ. ನೂರಾರು ನಿರ್ದೋಷಿ ಆದಿವಾಸಿಗಳು ಜೈಲುಗಳಲ್ಲಿ ಕೊಳೆಯುತ್ತಿದ್ದಾರೆ. ಸಿಪಿಐ(ಎಂ) ಮಾವೋವಾದಿಗಳ ಭಯೋತ್ಪಾದಕ ರಾಜಕೀಯದ ವಿರುದ್ಧ ಹೋರಾಟ ನಡೆಸುವ ಜೊತೆಗೆ, ಜೈಲುಗಳಲ್ಲಿರುವ ನಿರ್ದೋಷಿ ಆದಿವಾಸಿಗಳ ಬಿಡುಗಡೆಗಾಗಿ ಒತ್ತಾಯಿಸುತ್ತಿದೆ. ಪಶ್ಚಿಮ ಬಂಗಾಳದ ಮಾವೋವಾದಿಗಳು ತೃಣಮೂಲ ಕಾಂಗ್ರೆಸ್‌ನೊಂದಿಗೆ ಕೈಜೋಡಿಸಿ ಎಡರಂಗದ ಕಾರ್ಯಕರ್ತರನ್ನು ಗುರಿಮಾಡಿ, ಅದರಲ್ಲಿಯೂ ಮುಖ್ಯವಾಗಿ ಆದಿವಾಸಿ ಕಾರ್ಯಕರ್ತರನ್ನು ಗುರಿ

ಮಾಡಿ ಕೊಳ್ಳುತ್ತಿದ್ದಾರೆ. ಇದು ಬುಡಕಟ್ಟು–ವಿರೋಧಿ ಶಕ್ತಿಗಳಿಗೆ ನೆರವಾಗುತ್ತಿದೆ.

**ಭರ್ತಿ ಮಾಡದ ಮೀಸಲಾತಿ ಕೋಟಾಗಳು**

ಕೇಂದ್ರ ಮತ್ತು ರಾಜ್ಯ ಸಾರ್ವಜನಿಕ ಸೇವೆಗಳಲ್ಲಿ ಪರಿಶಿಷ್ಟ ಪಂಗಡಗಳವರಿಗೆ ಒಂದು ಸಂವಿದಾನಬದ್ಧ ಖಾತ್ರಿ ಮೀಸಲಾತಿಗೆ ಸಂಬಂಧಿಸಿದಂತೆ ಇದೆ. ಆದರೆ ಈ ಕಾನೂನು ಆಂಶಗಳನ್ನು ಪಾಲಿಸಲಾಗುತ್ತಿಲ್ಲ. ಕ್ಷುಲ್ಲಕ ಕಾರಣಗಳನ್ನೊಡ್ಡಿ ಉದ್ದೇಶಪೂರ್ವಕವಾಗಿಯೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮುಂಬಡ್ತಿ ಕೊಡದಿರುವ ಪಕ್ಷಪಾತದ ಧೋರಣೆ ಇದೆ. 2012 ರವರೆಗಿನ ದಾಖಲೆಗಳ ಪ್ರಕಾರವೇ, ಕೇಂದ್ರ ಸರ್ಕಾರದ ಕಛೇರಿಗಳಲ್ಲಿ 16678 ಹುದ್ದೆಗಳನ್ನು,ಅಂದರೆ ಶೇ. 57.4 ರಷ್ಟು ಮಾತ್ರ ತುಂಬಲಾಗಿದೆ, ಅದು ಕೂಡಾ ಹೆಚ್ಚಾಗಿ ವೇತನಶ್ರೇಣಿಯಲ್ಲಿ ಅತಿ ಕೆಳಗಿರುವ ಹುದ್ದೆಗಳಲ್ಲಿ. ಇದೀಗ ಖಾಸಗೀಕರಣದ ವ್ಯವಸ್ಥೆಯಲ್ಲಿ, ನೇಮಕಾತಿಗಳ ಮೇಲೆ ನಿರ್ಬಂಧ ಇರುವ ಸಂದರ್ಭದಲ್ಲಿಯಂತೂ ಸರ್ಕಾರಿ ಮತ್ತು ಸಾರ್ವಜನಿಕ ವಲಯಗಳಲ್ಲಿನ ಉದ್ಯೋಗಳಲ್ಲಿ ತೀವ್ರ ಕಡಿತವಾಗಿದೆ. ಇದು ಕೂಡ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಉದ್ಯೋಗಾವಕಾಶಗಳನ್ನು ತಟ್ಟಿದೆ. ಭರ್ತಿ ಮಾಡದೆ ಉಳಿದಿರುವ ಮೀಸಲಾತಿ ಹುದ್ದೆಗಳನ್ನು ಒಂದು ಕಾಲಮಿತಿಯೊಳಗೆ ತುಂಬಬೇಕು ಎಂಬ ಬೇಡಿಕೆಯ ಹೋರಾಟವನ್ನು ನಡೆಸುತ್ತಲೇ ಸಿಪಿಐ(ಎಂ) ಮೀಸಲಾತಿಯನ್ನು ಖಾಸಗಿ ಕ್ಷೇತ್ರಗಳಿಗೂ ವಿಸ್ತರಿಸಬೇಕೆಂಬ ಹೋರಾಟ ನಡೆಸಲು ಬದ್ಧವಾಗಿದೆ.

**ಬುಡಕಟ್ಟು ಉಪಯೋಜನೆ (TSP) ಹಣನೀಡಿಕೆಯಲ್ಲಿ ಕೊರತೆ**

ಬುಡಕಟ್ಟು ಉಪ ಯೋಜನೆಯ ಅಡಿಯಲ್ಲಿ ಬಜೆಟ್‌ನಲ್ಲಿ ಹಣ ಹಂಚಿಕೆಯಲ್ಲಿಯೂ ಕೊರತೆ ಮುಂದುವರಿಯುತ್ತಿದೆ, ಹೆಚ್ಚುತ್ತಿದೆ. ಈ ಯೋಜನೆಯಡಿ, ಪರಿಶಿಷ್ಟ – ಪಂಗಡದ ಜನಸಂಖ್ಯೆಗೆ ಅನುಗುಣವಾಗಿ ಹಣವನ್ನು ಬಜೆಟ್ ಮೂಲಕ ಆಯಾ ಸರ್ಕಾರಗಳು ಹಣ ಹಂಚಬೇಕು. ಅಥವಾ ಕನಿಷ್ಟ ಶೇ. 8.2 ರಷ್ಟಾದರೂ ಹಂಚಬೇಕು. ಆದಾಗ್ಯೂ 2013–14 ರ ಒಂದೇ ವರ್ಷದಲ್ಲಿ ಹಣನೀಡಿಕೆಯಲ್ಲಿ ರೂ. 20,983 ಕೋಟಿಗಳಷ್ಟು ಕೊರತೆಯಾಗಿದೆ. ಹಲವಾರು ಇಲಾಖೆಗಳಿಗೆ ಈ ಬುಡಕಟ್ಟು ಉಪಯೋಜನೆ ಮೂಲಕ ಖರ್ಚು ಮಾಡಬೇಕಿಲ್ಲ ಎಂಬಂತಹ ವಿನಾಯ್ತಿ ಗಳನ್ನು ಬೇಕಾಬಿಟ್ಟಿಯಾಗಿ ಕೊಡಲಾಗಿದೆ. ಅಲ್ಲದೆ ಮಾಡಿರುವ ಖರ್ಚುಗಳೂ ಪ್ರಶ್ನಾರ್ಹವಾಗಿವೆ, ಅವನ್ನು ಆದಿವಾಸಿ ಜನರ ಪ್ರಯೋಜನಕ್ಕೆಂದು ಮಾಡಿಲ್ಲ.

### ಅತ್ಯಂತ ವಂಚಿತ ಬದುಕು

ಸಾರ್ವಜನಿಕ ಸಂಪನ್ಮೂಲಗಳನ್ನು ಒದಗಿಸುವಲ್ಲಿನ ಈ ವಿಫಲತೆ ಇವರ ಆರ್ಥಿಕ – ಸಾಮಾಜಿಕ ದುಸ್ಥಿತಿಯಲ್ಲಿ ಪ್ರತಿಫಲನಗೊಂಡಿದೆ. 2011ರಲ್ಲಿ ಶೇ. 1 ರಷ್ಟು ಮಾತ್ರ ಗ್ರಾಮೀಣ ಆದಿವಾಸಿ ಕುಟುಂಬಗಳಿಗೆ ಶುದ್ಧೀಕರಿಸಿದ ನಲ್ಲಿ ನೀರು, ವಿದ್ಯುಚ್ಛಕ್ತಿ ಮತ್ತು ಮನೆಯೊಳಗೆ ಶೌಚಾಲಯಗಳಿತ್ತು. ಕೇವಲ 2.6 ಗ್ರಾಮೀಣ ಆದಿವಾಸಿ ಮನೆಗಳ ಒಳಗೆ ಅಡುಗೆ ಕೋಣೆ ಮತ್ತು ಹೊಗೆರಹಿತ ಅಡುಗೆ ಅನಿಲ ಇಂಧನ (ಸೀಮೆ ಎಣ್ಣೆ, ಅಡುಗೆ ಅನಿಲ, ಜೈವಿಕ ಅನಿಲ ಇತ್ಯಾದಿ) ಲಭ್ಯವಿತ್ತು.

ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಮತ್ತು ಇನ್ನಿತರೆ ಸಾಮಾಜಿಕ ವರ್ಗಗಳ ನಡುವಿನ ಅಂತರ ಈಗಲೂ ತುಂಬ ಹೆಚ್ಚಾಗಿದೆ. 2011 ರಲ್ಲಿ ಶೇ. 50 ಕ್ಕಿಂತ ಹೆಚ್ಚು ಗ್ರಾಮೀಣ ಆದಿವಾಸಿ ಮಹಿಳೆಯರು ಮತ್ತು ಶೇ. 32 ರಷ್ಟು ಗ್ರಾಮೀಣ ಆದಿವಾಸಿ ಪುರುಷರು ಅನಕ್ಷರಸ್ಥರಾಗಿದ್ದರು. ಇತರೆ ಸಾಮಾಜಿಕ ವರ್ಗಗಳಲ್ಲಿ ಇದು ಗ್ರಾಮೀಣ ಮಹಿಳೆಯರಲ್ಲಿ ಶೇ. 32 ರಷ್ಟು ಮತ್ತು ಗ್ರಾಮೀಣ ಪುರುಷರಲ್ಲಿ ಶೇ. 17 ರಷ್ಟು.

ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಶೈಕ್ಷಣಿಕ ಸಂಸ್ಥೆಗಳನ್ನು ಹಿಂದುತ್ವ ಸಿದ್ಧಾಂತವನ್ನು ಯುವ ಮನಸ್ಸುಗಳಿಗೆ ತುಂಬುವ ವೇದಿಕೆಗಳನ್ನಾಗಿ ಬಳಸಿಕೊಳ್ಳುತ್ತಿದ್ದಾರೆ. ಛತ್ತೀಸ್‌ಗಡ್ ರಾಜ್ಯದಲ್ಲಿ ಸೇವಾ ಭಾರತಿ ಮತ್ತು ಆದಿವಾಸಿ ಕಲ್ಯಾಣ ಪರಿಷತ್‌ನವರು ನಡೆಸುತ್ತಿರುವ 'ಏಕಲವ್ಯ' ಶಾಲೆಗಳಿಗೆ ಸರ್ಕಾರದ ಅನುದಾನ ಸಿಗುತ್ತಿದೆ. ಸೇವಾ ಭಾರತಿ ಮಧ್ಯಪ್ರವೇಶ ಮತ್ತು ಛತ್ತೀಸ್‌ಗಡ್ ರಾಜ್ಯಗಳಲ್ಲಿ ಸುಮಾರು 5000 ಯೋಜನೆಗಳನ್ನು ನಡೆಸುತ್ತಿದ್ದು ಅವುಗಳಿಗೆ ಭಾಗಶಃವಾದರೂ ಸರ್ಕಾರದ ನೆರವು ಸಿಗುತ್ತಿದೆ. ಗುಜರಾತ್ ರಾಜ್ಯದಲ್ಲಿ ಏಕಲವ್ಯ ಮಾದರಿ ವಸತಿ ಶಾಲೆಗಳ ಕೇಂದ್ರೀಯ ಯೋಜನೆಯನ್ನು ಸಾರ್ವಜನಿಕ – ಖಾಸಗಿ ಪಾಲುದಾರಿಕೆ(ಪಿಪಿಪಿ) ವಿಧಾನದಲ್ಲಿ ಜಾರಿಗೊಳಿಸಲಾಗಿದೆ. ಇದು ಆದಿವಾಸಿ ಪ್ರದೇಶಗಳಲ್ಲಿನ ಶಾಲೆಗಳನ್ನು ಸಂಘ ಪರಿವಾರದ ನಿಕಟವರ್ತಿ ಶಿಕ್ಷಣ–ಉದ್ಯಮಿಗಳ ಕೈಗೆ ನಡೆಸಲು ಒಪ್ಪಿಸಲಾಗಿದೆ. ಇಲ್ಲಿ ಖಾಸಗೀಕರಣ ಮತ್ತು ಹಿಂದುತ್ವೀಕರಣ ಎರಡೂ ಜತೆ–ಜತೆಯಾಗಿಯೇ ನಡೆದಿವೆ.

### ವ್ಯವಸಾಯಗಾರರನ್ನು ಹಂಗಾಮಿ ಕಾರ್ಮಿಕರನ್ನಾಗಿ ಪರಿವರ್ತಿಸುವ'ಕಾರ್ಪೊರೇಟ್–ಪರ ಧೋರಣೆಗಳು

2011 ರ ಜನಗಣತಿ ಪ್ರಕಾರ, ಸ್ವಾತಂತ್ರ್ಯ ಬಂದ ನಂತರ ಮೊಟ್ಟಮೊದಲ ಬಾರಿಗೆ ಕಡಿಮೆಯೆಂದರೆ, ಶೇ. 57 ರಷ್ಟಿರುವ ಆದಿವಾಸಿ ಪುರುಷರಲ್ಲಿ ವ್ಯವಸಾಯದಲ್ಲಿ

ನಿರತರಾಗಿರುವವರ ಸಂಖ್ಯೆ ಕೂಲಿಕೆಲಸ ಮಾಡುವವರಿಗಿಂತ ಕಡಿಮೆಯಾಗಿದೆ. 2001ರಲ್ಲಿ ಶೇ. 51 ಪುರುಷ ಆದಿವಾಸಿಗಳು ವ್ಯವಸಾಯ ಮಾಡುತ್ತಿದ್ದರೆ, ಇದೀಗ 2011ರಲ್ಲಿ ಅದು ಕೇವಲ ಶೇ. 41.6 ಕ್ಕೆ ಇಳಿದಿದೆ. ಇನ್ನು ಆದಿವಾಸಿ ಮಹಿಳೆಯರಲ್ಲಿ ಈ ಬದಲಾವಣೆ ಮತ್ತಷ್ಟು ಎದ್ದು ಕಾಣುತ್ತದೆ. 2001 ರಲ್ಲಿ ಶೇ. 42.6 ರಷ್ಟು ವ್ಯವಸಾಯದಲ್ಲಿದ್ದರು, ಇದೀಗ 2011 ರಲ್ಲಿ ಶೇ. 31.3 ಕ್ಕೆ ಇಳಿದಿದೆ. ಆದಿವಾಸಿಗಳಲ್ಲಿ ಅಲ್ಪಾವಧಿ ವಲಸೆಗಾರರಾಗಿ  ಹೋಗುವುದು ಕೂಡ ಹೆಚ್ಚಾಗಿದೆ, ಇದರಲ್ಲಿ ಮಹಿಳೆಯರೂ ಸೇರಿದ್ದಾರೆ, ಎಂದು ಅಧ್ಯಯನಗಳು ತಿಳಿಸುತ್ತವೆ.

ಈ ಅಂಕಿ–ಅಂಶಗಳ ಹಿಂದಿರುವುದು, ಆದಿವಾಸಿಗಳ ಮೇಲೆ ಹಿಂಸಾಚಾರ ಮತ್ತು ಶೋಷಣೆಯ ವಾಸ್ತವತೆ– ಸರ್ಕಾರದ ಕಾರ್ಪೊರೇಟ್–ಪರ ಭೂಮಿ ಧೋರಣೆಗಳು ಉಂಟು ಮಾಡಿರುವ ವ್ಯಾಪಕವಾದ ಕರ್ಷಕ ಸಂಕಟಗಳು ಕೃಷಿಕೂಲಿಕಾರರು ಮತ್ತು ಬಹಳಷ್ಟು ರೈತಾಪಿಗಳನ್ನು ತಟ್ಟಿದೆ. ಅದರಲ್ಲಿಯೂ ಆದಿವಾಸಿ ಸಮುದಾಯಗಳನ್ನು ಅತಿ ಹೆಚ್ಚಾಗಿ ಇದು ತಟ್ಟಿದೆ  ಎಂಬ ಅಂಶಗಳು ಎಲ್ಲ ಸರ್ಕಾರಿ ಅಂಕಿ–ಅಂಶಗಳಲ್ಲಿ  ಕಾಣುತ್ತಿದೆ. ಹೀಗೆ ಎಲ್ಲವನ್ನು ಕಳಕೊಂಡ ಆದಿವಾಸಿಗಳು ಅನಿವಾರ್ಯವಾಗಿ ಬಹು ದೊಡ್ಡ ಸಂಖ್ಯೆಯಲ್ಲಿ ಅತ್ಯಂತ ಕೆಳ ಹಂತಗಳಲ್ಲಿ ಕೂಲಿಗಾರರ ಪಡೆಗಳನ್ನು ಸೇರಿಕೊಳ್ಳುವ ಬಲವಂತಕ್ಕೆ ಒಳಗಾಗಿದ್ದಾರೆ. ಇವರಲ್ಲಿ ಕೇವಲ ಶೇ. 8 ರಷ್ಟು ಆದಿವಾಸಿಗಳು ಖಾಯಂ ಕಾರ್ಮಿಕರು ಉಳಿದ ಶೇ. 44 ರಷ್ಟು ಆದಿವಾಸಿಗಳು ಹಂಗಾಮಿ ಕಾರ್ಮಿಕರಾಗಿದ್ದಾರೆ.

**ಆದಿವಾಸಿ ಮಹಿಳೆಯರು:**

ಈ ನೀತಿಗಳ ಹೊರೆಗಳನ್ನು ಬಹುಪಾಲು ಹೊರುತ್ತಿರುವವರು ಆದಿವಾಸಿ ಮಹಿಳೆಯರು, ಹೆಚ್ಚಿನ ಸಂಖ್ಯೆಯಲ್ಲಿ ಅತ್ಯಂತ ಶೋಚನೀಯ ಸ್ಥಿತಿಗಳಲ್ಲಿ ಅವರು ವಲಸೆ ಹೋಗುತ್ತಿದ್ದಾರೆ. ಇವರಲ್ಲಿ ಅಪೌಷ್ಟಿಕತೆ ವಿಪರೀತವಾಗಿ ಕಾಣುತ್ತಿರುವುದು ಅವರೆಷ್ಟು ವಂಚಿತರಾಗಿದ್ದಾರೆ ಎಂಬುದನ್ನು ತೋರಿಸುತ್ತದೆ. ಆದಿವಾಸಿ ಮಹಿಳೆಯರ ಮೇಲೆ ಕಾಂಟ್ರಾಕ್ಟರುಗಳು, ಸೂಪರ್‌ವೈಸರುಗಳು ಮತ್ತು ಫಾರೆಸ್ಟ್ ಗಾರ್ಡುಗಳ ಹಿಂಸಾಚಾರಕ್ಕೂ ಅವರು ಭೀಕರ ಕೆಲಸದ ಪರಿಸ್ಥಿತಿಗಳಿಗೂ ನೇರ ಸಂಬಂಧವಿದೆ. ಇಂತಹ ಹಿಂಸಾಚಾರಗಳು ವರದಿಯಾಗುವುದು ಬಹಳ ಕಡಿಮೆ. ಆದಿವಾಸಿ ಮಹಿಳೆಯರ ಶೋಷಣೆ ಹೇಗೆ ನಡೆಯುತ್ತಿದೆ ಎಂಬುದನ್ನು ಪಶ್ಚಿಮ ಬಂಗಾಲದ ಬೀರ್‌ಭೂಮ್  ಜಿಲ್ಲೆಯಲ್ಲಿ ನಡೆದ ಒಂದು ಅತಿಹೀನ ಪ್ರಕರಣ ಎತ್ತಿ ತೋರಿಸುತ್ತದೆ. ಸುಪ್ರೀಂಕೋರ್ಟ್  ಸಹ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕಾಗಿ

ಬಂದಿದೆ. ಆಡಳಿತಾರೂಢ ತೃಣಮೂಲ ಕಾಂಗ್ರೆಸ್ ನ ಸ್ಥಳೀಯ ಗೂಂಡಾಗಳು ಒಬ್ಬ ಆದಿವಾಸಿ ಯುವತಿಯು ತನ್ನ ಜೀವನ ಜೊತೆಗಾರರನ್ನು ಧೈರ್ಯದಿಂದ ಆಯ್ಕೆ ಮಾಡಿಕೊಂಡದ್ದಕ್ಕೆ 'ಶಿಕ್ಷೆ'ಯಾಗಿ ಆಕೆಯ ಮೇಲೆ ಅತ್ಯಾಚಾರ ನಡೆಸಲು ಮಂಜೂರಾತಿ ನೀಡಿದರು. ಆದಿವಾಸಿಗಳ ಶೋಷಕರು ಮತ್ತು ಆಳುವ ಪಕ್ಷಗಳ ನಡುವೆ ಇರುವ ಕೊಂಡಿಗೆ ತೃಣಮೂಲ ಕಾಂಗ್ರೆಸ್ ಆಳ್ವಿಕೆಯ ಪಶ್ಚಿಮ ಬಂಗಾಲದ ಈ ಪ್ರಕರಣ ಒಂದು ಉದಾಹರಣೆಯಾಗಿದೆ. ಕೇವಲ ಎಡಪಕ್ಷಗಳು ಮತ್ತು ಆಂದೋಲನಗಳು ಮಾತ್ರವೇ ಆದಿವಾಸಿ ಮಹಿಳೆಯರ ಸಂರಕ್ಷಣೆ ಹಾಗೂ ಅವರ ಆರ್ಥಿಕ – ಸಾಮಾಜಿಕ ಹಕ್ಕುಗಳ ಪ್ರಶ್ನೆಗಳನ್ನು ಎತ್ತಿಕೊಂಡಿವೆ.

**ಬುಡಕಟ್ಟು–ವಿರೋಧಿ ಕಾನೂನು ಕಟ್ಟಳೆಗಳು**

ಸ್ವತಃ ಸರ್ಕಾರದ 12ನೇ ಪಂಚವಾರ್ಷಿಕ ಯೋಜನೆ ಗಮನಿಸಿದಂತೆ, ಸ್ವಾತಂತ್ರ್ಯ ಬಂದ ನಂತರದಿಂದ ಇಲ್ಲಿಯವರೆವಿಗೂ ಅಂದಾಜಿನಂತೆ ಸುಮಾರು 6 ಕೋಟಿ ಜನರು ಅಭಿವೃದ್ಧಿ ಯೋಜನೆಗಳ ಕಾರಣದಿಂದ ಸ್ಥಳಾಂತರಗೊಂಡಿದ್ದಾರೆ. ಇವರಲ್ಲಿ ಸುಮಾರು ಶೇ. 40ದಷ್ಟು ಆದಿವಾಸಿಗಳೇ ಆಗಿದ್ದಾರೆ. . ಭಾರತದ ಜನಸಂಖ್ಯೆಯಲ್ಲಿ ಆದಿವಾಸಿಗಳ ಸಂಖ್ಯೆ ಶೇ. 8 ರಷ್ಟು.. ಅಂದರೆ ತಮ್ಮ ಜನಸಂಖ್ಯೆಯ ಪ್ರಮಾಣದಲ್ಲಿ ಐದು ಪಟ್ಟು ಸ್ಥಳಾಂತರಗೊಳಿಸಲ್ಪಟ್ಟಿದ್ದಾರೆ. ಹೊಸ ಭೂಸ್ವಾಧೀನ ಕಾಯ್ದೆಯು, ಆದಿವಾಸಿ ಭೂಮಿಯನ್ನು ಬಲವಂತದಿಂದ ವಹಿಸಿಕೊಳ್ಳಲು ಅನುವು ಮಾಡಿ ಕೊಡುತ್ತದೆ. ಇದು ಈಗಿರುವ 16 ಕಾಯಿದೆಗಳಿಗೆ ವಿನಾಯಿತಿ ಕೊಟ್ಟಿದೆ. ಇದರಲ್ಲಿ ಆದಿವಾಸಿ ಸಮುದಾಯವನ್ನು ಅತ್ಯಂತ ಹೆಚ್ಚಾಗಿ ತಟ್ಟುವ ಕಲ್ಲಿದ್ದಲು ಮತ್ತು ಗಣಿಗಾರಿಕೆ ಕಾಯಿದೆಯೂ ಸೇರಿದೆ. ಇನ್ನೂ ಕೆಟ್ಟ ಸಂಗತಿಯೆಂದರೆ, 'ಸಾರ್ವಜನಿಕ ಉದ್ದೇಶ' ಎಂಬ ಹೆಸರಿನಲ್ಲಿ, ಸಂತ್ರಸ್ತ ಆದಿವಾಸಿ ಸಮುದಾಯಗಳ ಒಪ್ಪಿಗೆ ಪಡೆಯದೆ ಭೂಸ್ವಾಧೀನ ಪಡಿಸಿಕೊಳ್ಳುವುದನ್ನು ಕಾನೂನುಬದ್ಧಗೊಳಿಸಿದೆ. ಗಣಿಗಾರಿಕೆ ಮತ್ತು ಖನಿಜಗಳ ಕಾಯಿದೆಗೆ ಪ್ರಸ್ತಾವಿತ ತಿದ್ದುಪಡಿಗಳೊಂದಿಗೆ ಇದು ಆದಿವಾಸಿಗಳ ಹಕ್ಕುಗಳ ಮೇಲೆ ಒಂದು ಏಕೀಕೃತ ದಾಳಿ; ಅದೃಷ್ಟವಶಾತ್ ಈ ತಿದ್ದುಪಡಿಗಳನ್ನು ಇನ್ನೂ ಸಂಸತ್ತು ಅಂಗೀಕರಿಸಿಲ್ಲ.

ಗಣಿಗಾರಿಕೆ ಮತ್ತು ಖನಿಜಗಳು ಕಾಯಿದೆಯಲ್ಲಿನ ತಿದ್ದುಪಡಿಗಳು 5ನೇ ಶೆಡ್ಯೂಲ್‌ನ ಅಡಿಯಲ್ಲಿ ಬರುವ ಪ್ರದೇಶಗಳನ್ನೂ ಸೇರಿದಂತೆ ಎಲ್ಲ ಖನಿಜ ಸಂಪನ್ನ ಪ್ರದೇಶಗಳನ್ನು ಯಾವುದೇ ರೀತಿಯ ಒಪ್ಪಿಗೆ ಪಡೆಯುವ ಪ್ರಶ್ನೆಗಳಿಲ್ಲದೇ ತೆರೆದು ಕೊಡಲಿಕ್ಕಾಗಿಯೇ ರೂಪಿಸಿದಂತವುಗಳು. ಈ ತಿದ್ದುಪಡಿಗಳು ಖಾಸಗಿ ಕಂಪನಿಗಳಿಗೆ ಭೂಮಿಯನ್ನು

ಭೋಗ್ಯಕ್ಕೆ ಕೊಡಲು ಅನುಮತಿ ನೀಡುತ್ತವೆ ಮತ್ತು ವಿದೇಶಿ ಕಂಪನಿಗಳು ಖನಿಜಗಳಿಗಾಗಿ ಭೂಮಿಯ ಸಮೀಕ್ಷೆ ಮಾಡಲು ಪ್ರೋತ್ಸಾಹಿಸುತ್ತವೆ. ಆರಂಭದಲ್ಲಿ ಗಣಿ ಕಂಪನಿಗಳ ಎಲ್ಲಾ ಲಾಭಗಳ ಶೇ. 26 ರಷ್ಟನ್ನು ಬುಡಕಟ್ಟು ಭೂಮಿ ಮತ್ತು ಸಂಪನ್ಮೂಲಗಳನ್ನು ಕಳಕೊಂಡವರಿಗೆ ಕೊಡುವಂತಹ ಆಶ್ವಾಸನೆಯ ಪ್ರಸ್ತಾವವಿತ್ತು. ಅದನ್ನೂ ಈಗ ತೆಗೆದು ಹಾಕಲಾಗಿದೆ. ಈ ಮೂಲಕ ಸರ್ಕಾರ ಆದಿವಾಸಿ ಜನರ ಸಂವಿಧಾನಿಕ ಹಕ್ಕುಗಳ ಸಂಪೂರ್ಣ ಉಲ್ಲಂಘನೆಯನ್ನು ಕಾನೂನುಬದ್ಧಗೊಳಿಸುವ ಒಂದು ಚೌಕಟ್ಟನ್ನು ನಿರ್ಮಿಸುತ್ತಿದೆ.

### ಬೇರೆ ಉದ್ದೇಶಗಳಿಗಾಗಿ ಅರಣ್ಯ ಭೂಮಿ ಮತ್ತು ಆದಿವಾಸಿ ವಸತಿಗಳ ಬಳಕೆ ಹಾಗೂ ಸ್ವಾಧೀನ

ಐದನೇ ಶೆಡ್ಯೂಲ್ ಪ್ರದೇಶಗಳಲ್ಲಿ ಆದಿವಾಸಿಗಳ ಭೂಮಿಯನ್ನು ಗಣಿಗಾರಿಕೆ, ನೀರಾವರಿ ಯೋಜನೆ ಮತ್ತು ವಿದ್ಯುತ್ ಉತ್ಪಾದನೆಗಾಗಿ ಬಿರುಸಿನಿಂದ ವಶಪಡಿಸಿಕೊಳ್ಳಲಾಗುತ್ತಿದೆ. ಈ ಶೆಡ್ಯೂಲ್ ಗೆ ಒಳಪಡದ ಪ್ರದೇಶಗಳಲ್ಲಿ ರಿಯಲ್ ಎಸ್ಟೇಟ್ ಮಾಫಿಯಾ ಮತ್ತು ಇತರರಿಂದ ಬುಡಕಟ್ಟು ಭೂಮಿಗಳ ಕಬಳಿಕೆ, ಬುಡಕಟ್ಟು ಸಮುದಾಯಗಳು ಲಘು ಅರಣ್ಯ ಉತ್ಪನ್ನಗಳ ಸಂಗ್ರಹಕ್ಕಾಗಿ ಅಥವ ಸಾಗುವಳಿಗಾಗಿ ಬಳಸುವ ಎಲ್ಲರಿಗೂ ಸೇರಿದ ಅರಣ್ಯ ಭೂಮಿಯನ್ನು ಬೇರೆ ಉದ್ದೇಶಗಳತ್ತ ತಿರುಗಿಸುವುದು ಹಿಂದೆಂದೂ ಕಾಣದ ರೀತಿಯಲ್ಲಿ ನಡೆಯುತ್ತಿದೆ. ಸ್ವತಃ ಪರಿಸರ ಮತ್ತು ಅರಣ್ಯ ಮಂತ್ರಾಲಯದ (MoEFನ) ದಾಖಲೆಯ ಪ್ರಕಾರವೇ ಪ್ರತಿತಿಂಗಳಿಗೂ ಅರಣ್ಯ ಪ್ರದೇಶದ ಭೂಮಿಯನ್ನು ಬೇರೆಯೇ ಉದ್ದೇಶಗಳಿಗೆ ತಿರುಗಿಸುವಂತದ್ದು ಗಣನೀಯವಾಗಿ ಹೆಚ್ಚಾಗುತ್ತಿದೆ. ಜನವರಿ – ಏಪ್ರಿಲ್ 2013 ರ ನಡುವೆ ಈ ಮಂತ್ರಾಲಯ (MoEF)ದ ದಾಖಲೆಗಳ ಪ್ರಕಾರವೇ 12571 ಹೆಕ್ಟೇರ್ ಅರಣ್ಯ ಭೂಮಿಯನ್ನು ಅಂದರೆ ಸರಾಸರಿ ತಿಂಗಳಿಗೆ 3143 ಹೆಕ್ಟೇರ್ ಭೂಮಿಗೆ ಅದು ಮಂಜೂರಾತಿ ನೀಡಿದೆ. 2012 ರಲ್ಲಿ MoEF 26,595 ಹೆಕ್ಟೇರ್ ಭೂಮಿಯನ್ನು ಅಂದರೆ, ತಿಂಗಳ ಸರಾಸರಿ 2,216 ಹೆಕ್ಟೇರ್ ಭೂಮಿಗೆ ಮಂಜೂರಾತಿ ನೀಡಿದೆ. ಹೀಗೆ ಬೇರ ಉದ್ದೇಶಗಳಿಗೆ ತಿರುಗಿಸಲ್ಪಟ್ಟ ಭೂಮಿಯ ಪ್ರಮಾನದಲ್ಲಿ 42ಶೇ.ದಷ್ಟು ಹೆಚ್ಚಳ ದಾಖಲಾಗಿದೆ. 2013 ರಲ್ಲಿ ಹೀಗೆ ತಿರುಗಿಸಲ್ಪಟ್ಟ ಅರಣ್ಯಭೂಮಿ ಶೇ. 42 ರಷ್ಟು ಗಣಿಗಾಗಿ, ಶೇ. 22 ರಷ್ಟು ನೀರಾವರಿ ಯೋಜನೆಗಳಿಗಾಗಿ ಮತ್ತು ಶೇ. 10.5 ರಷ್ಟು ರಸ್ತೆ ನಿರ್ಮಾಣಕ್ಕಾಗಿ.

ಬಿಜೆಪಿ ಮತ್ತು ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರಗಳು ಈ ವಿಚಾರದಲ್ಲಿ

ಒಂದೇ ರೀತಿಯ ಧೋರಣೆಗಳನ್ನು ಅನುಸರಿಸುತ್ತಿವೆ.

ಆಂಧ್ರ ಪ್ರದೇಶದಲ್ಲಿ ವಿಶಾಖಪಟ್ಟಣದ ಒಂದೇ ಜಿಲ್ಲೆಯಲ್ಲಿ 1.15 ಲಕ್ಷ ಎಕರೆ ಭೂಮಿಯನ್ನು ಗಣಿ ಕಂಪನಿಗಳಿಗೆ ಮುಖ್ಯವಾಗಿ ಬಾಕ್ಸೈಟ್‌ಗಾಗಿ ಮತ್ತು ಜೇಡಿ ಗಣಿಗಾರಿಕೆಗಾಗಿ ಯಾವುದೇ ಒಪ್ಪಿಗೇ ತೆಗೆದುಕೊಳ್ಳದೇ ಭೋಗ್ಯಕ್ಕೆ ನೀಡಲಾಗಿದೆ. ಇವುಗಳಲ್ಲಿ ಹೆಚ್ಚಿನವು ಅರಣ್ಯ ಭೂಮಿ. ಮಧ್ಯಪ್ರದೇಶದಲ್ಲಿ ಒಂದೇ ವರ್ಷದಲ್ಲಿ 5ನೇ ಶೆಡ್ಯೂಲ್ ಪ್ರದೇಶದ ವ್ಯಾಪ್ತಿಯೊಳಗೆ 13000 ಹೆಕ್ಟೇರ್ ಅರಣ್ಯ ಭೂಮಿಯನ್ನು ಖಾಸಗಿ ವಿದ್ಯುತ್ ಯೋಜನೆಗಾಗಿ ಕೊಡಲು ಹಸಿರು ನಿಶಾನೆ ತೋರಿಸಲಾಗಿದೆ, ಇಲ್ಲಿಯೂ ಯಾವುದೇ ಒಪ್ಪಿಗೆ ಪಡೆಯದೆ. ಛತ್ತೀಸ್‌ಗಡ್ ರಾಜ್ಯದಲ್ಲಿಯೂ ಸಹ 5ನೇ ಶೆಡ್ಯೂಲ್ ಪ್ರದೇಶದಲ್ಲಿಯೇ ಅಲ್ಲಿನ ಗ್ರಾಮ ಸಭೆಯ ಅನುಮತಿ ಪಡೆಯದೆ, ರಿಲೆಯನ್ಸ್ ನಂತ ಖಾಸಗಿ ಕಂಪನಿಗಳಿಗೆ ಕಲ್ಲಿದ್ದಲು ಯೋಜನೆಗಾಗಿ ಪರವಾನಿಗೆ ನೀಡಲಾಗಿದೆ. ಜಾರ್ಖಂಡ್ ರಾಜ್ಯದಲ್ಲಿ 2000 ಇಸವಿಯಲ್ಲಿ ಈ ರಾಜ್ಯ ರಚನೆಗೊಂಡಂದಿನಿಂದ ಇಲ್ಲಿಯವರೆಗೆ ಆಳ್ವಿಕೆ ಮಾಡಿದ ಎಲ್ಲ ಸರಕಾರಗಳು, ಕಾಂಗ್ರೆಸ್, ಬಿಜೆಪಿ ಅಥವಾ ಜೆಂಎಂಎಂ ನಂತಹ ಪ್ರಾದೇಶಿಕ ಪಕ್ಷದ ಸರ್ಕಾರಗಳು ಸಂವಿಧಾನಾತ್ಮಕ ಮತ್ತು ಕಾನೂನು ಕಟ್ಟಳೆಗಳನ್ನು ಸಂಪೂರ್ಣವಾಗಿ ಉಲ್ಲಂಘಿಸಿ 5ನೇ ಶೆಡ್ಯೂಲ್ ಪ್ರದೇಶಗಳಲ್ಲಿಯೇ ಗಣಿ ಮತ್ತು ವಿದ್ಯುತ್ ಕಂಪನಿಗಳ ಜೊತೆ ಒಪ್ಪಂದಕ್ಕೆ ಸಹಿ ಮಾಡಿಕೊಂಡು ಅರಣ್ಯ ಭೂಮಿಯನ್ನು ನೀಡಿವೆ. ಒರಿಸ್ಸಾ ರಾಜ್ಯದ ಬಿಜೆಡಿ ನೇತತ್ವದ ಸರ್ಕಾರವು ಅ ಪೋಸ್ಕೋ ಮತ್ತು ವೇದಾಂತ ಪ್ರಾಜೆಕ್ಟ್‌ಗಳಲ್ಲಿ ಮಾಡಿರುವಂತೆ ರಣ್ಯ ಹಕ್ಕುಗಳ ಕಾಯಿದೆಯಲ್ಲಿನ ಅಂಶಗಳನ್ನು ಸಂಪೂರ್ಣವಾಗಿ ಉಲ್ಲಂಘಿಸಿದೆ.

ಗುಜರಾತ್‌ನಲ್ಲಿ 5ನೇ ಶೆಡ್ಯೂಲ್ ಪ್ರದೇಶಗಳ ಮತ್ತು ಅರಣ್ಯ ಪ್ರದೇಶಗಳ ಸಾವಿರಾರು ಹೆಕ್ಟೇರ್ ಭೂಮಿಯನ್ನು ಬಲವಂತದಿಂದ ವಹಿಸಿಕೊಂಡಿದೆ. ಉಮರ್‌ಗಾಂವ್, ಭಿಲಾಡ್ ಮತ್ತು ಸರ್‌ಗವ್‌ನಲ್ಲಿ ಭೂಮಿಯನ್ನು ಕೈಗಾರಿಕೋದ್ಯಮಿಗಳ ಕೈಗೊಪ್ಪಿಸಲಾಗಿದೆ. ಸ್ವತಃ ಸರ್ಕಾರವೇ ಬೇನಾಮಿ ವ್ಯವಹಾರಗಳಿಗೆ ಪ್ರೋತ್ಸಾಹ ನೀಡಿರುವುದರಿಂದ ದೊಡ್ಡ ಪ್ರಮಾಣದಲ್ಲಿ ಆದಿವಾಸಿ ಭೂಮಿಯ ಪರಭಾರೆ ನಡೆದಿದೆ.

ಆದಿವಾಸಿಗಳು ಎದುರು ನಿಂತು ಹೋರಾಟ ನಡೆಸಿದಲ್ಲಿ ಮಾತ್ರ ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಸಾಧ್ಯವಾಗಿದೆ.

## ಶೆಡ್ಯೂಲ್ ಪ್ರದೇಶಗಳ ಹೊರಗೆ ರಕ್ಷಣೆಯಿಲ್ಲ

ಐದನೇ ಮತ್ತು ಆರನೇ ಶೆಡ್ಯೂಲ್ ಪ್ರದೇಶಗಳ ಹೊರಗೆ ಇರುವ ಪ್ರದೇಶಗಳಲ್ಲಿ ಆದಿವಾಸಿಗಳ ಭೂಮಿಗೆ ಯಾವುದೇ ರೀತಿಯ ಸಂರಕ್ಷಣೆ ಇರುವುದಿಲ್ಲ. ಏಕೆಂದರೆ ಭೂಮಿ ವರ್ಗಾವಣೆ ನಿಯಂತ್ರಣ (LTR) ಕಾಯಿದೆ 1/70 ಅವಕ್ಕೆ ಅನ್ವಯಿಸುವುದಿಲ್ಲ. 2011 ರ ಜನಗಣತಿಯ ಪ್ರಕಾರ ಒಟ್ಟು ಆದಿವಾಸಿ ಜನಸಂಖ್ಯೆಯಲ್ಲಿ ಶೇ. 19 ರಷ್ಟು ಮಂದಿ ಈ ಶೆಡ್ಯೂಲ್ ಪ್ರದೇಶಗಳಿರದ ರಾಜ್ಯಗಳಲ್ಲಿ ಜೀವಿಸುತ್ತಿದ್ದಾರೆ. ಇದರ ಜೊತೆಗೆ, ಐದನೇ ಶೆಡ್ಯೂಲ್ ರಾಜ್ಯಗಳಲ್ಲಿ ಬಹಳಷ್ಟು ಸಂಖ್ಯೆಯ ಆದಿವಾಸಿಗಳು ರಕ್ಷಿತ ಪ್ರದೇಶಗಳ ಹೊರಗಿದ್ದಾರೆ. ಆಂಧ್ರಪ್ರದೇಶದಲ್ಲಿ ಒಟ್ಟು ಆದಿವಾಸಿ ಜನಸಂಖ್ಯೆಯಲ್ಲಿ ಶೇ. 52 ರಷ್ಟು 'ಬಯಲು ಸೀಮೆಯ ಬುಡಕಟ್ಟು' ಜನರಿದ್ದಾರೆ. ಇವರಲ್ಲಿ ಶೇ. 80 ರಷ್ಟು ಭೂರಹಿತರಾಗಿದ್ದಾರೆ.

ಇದಲ್ಲದೆ, ಶೆಡ್ಯೂಲ್ ಪ್ರದೇಶಗಳ ಎಲ್ಲೆಗಳನ್ನು ಗುರುತಿಸುವಲ್ಲಿಯೂ ತುಂಬ ಗಂಭೀರವಾದ ಲೋಪಗಳಿವೆ, ಹಲವು ಸಂದರ್ಭಗಳಲ್ಲಿ ಗ್ರಾಮ ಸರಹದ್ದುಗಳನ್ನು ಸರಿಯಾಗಿ ಅನುಸರಿಸುವುದಿಲ್ಲವಾದ್ದರಿಂದ ಸಂದಿಗ್ಧತೆಗಳಿವೆ. ಕೆಲವೆಡೆಗಳಲ್ಲಿ ಶೆಡ್ಯೂಲ್ ಪ್ರದೇಶಗಳ ಪಕ್ಕದಲ್ಲೇ ಸಾಕಷ್ಟು ಪರಿಶಿಷ್ಟ ಪಂಗಡಗಳ ಜನರಿರುವ ಬುಡಕಟ್ಟು ಹಳ್ಳಿಗಳಿರುತ್ತವೆ. ಆದರೆ ಅವನ್ನು ಶೆಡ್ಯೂಲ್ ಪ್ರದೇಶಗಳೆಂದು ಘೋಷಿಸಿರುವುದಿಲ್ಲ. ಈ ಕಾರಣಗಳಿಂದಾಗಿ ಶೆಡ್ಯೂಲ್ ಪ್ರದೇಶಗಳ ಸುತ್ತಮುತ್ತಲಿರುವ ಬುಡಕಟ್ಟು ಗ್ರಾಮಗಳಲ್ಲಿ ಭೂಮಿಯ ಪರಭಾರೆ ದೊಡ್ಡ ಪ್ರಮಾಣದಲ್ಲಿರುತ್ತದೆ.

## ಅರಣ್ಯ ಹಕ್ಕುಗಳ ಕಾಯಿದೆಯ ಬುಡಮೇಲು

2006 ರಲ್ಲಿ ಎಡಪಕ್ಷಗಳ ಒತ್ತಡಕ್ಕೆ ಮಣಿದು ಈ ಕಾಯಿದೆಯನ್ನು ಅಂಗೀಕರಿಸಲಾಯಿತು. ಆದರೆ ಯುಪಿಎ–2 ಸರ್ಕಾರ ಅದನ್ನು ಬುಡಮೇಲು ಮಾಡಲು, ಅದರ ಜಾರಿಯನ್ನು ದುರ್ಬಲಗೊಳಿಸಲು ತನಗೆ ಸಾಧ್ಯವಿರುವುದನ್ನೆಲ್ಲ ಮಾಡಿದೆ. ಏಕೆಂದರೆ, ಅರಣ್ಯ ಪ್ರದೇಶಗಳನ್ನು ಗಣಿಗಾರಿಕೆ ನಡೆಸಲು ಮತ್ತು ಮೂಲಸೌಕರ್ಯಗಳ ಪ್ರಾಜೆಕ್ಟ್‌ಗಳಿಗೆ ತೆರೆದು ಕೊಡಲು ಒಂದು ಅಡಚಣೆ ಎಂದು ಕಾಣಲಾಗುತ್ತಿದೆ.

ಸೆಪ್ಟೆಂಬರ್ 2013ರ ವರೆಗೆ, ಆಕ್ರಮಿತ ಅರಣ್ಯ ಪ್ರದೇಶಗಳಲ್ಲಿ ಸುಮಾರು 35.39 ಲಕ್ಷ ವೈಯಕ್ತಿಕ ಮತ್ತು ಸಮುದಾಯಗಳ ಹಕ್ಕುಪತ್ರ(ಪಟ್ಟಾ)ದ ದಾವೆಗಳು ಬಂದಿವೆ. ಇತ್ಯರ್ಥಕ್ಕಾಗಿ ಅರ್ಜಿ ಹಾಕಿದ್ದಾರೆ. ಇದರಲ್ಲಿ ಕೇವಲ 14.06 ಲಕ್ಷ ದಾವೆಗಳನ್ನು ಮಾತ್ರ ಸ್ವೀಕರಿಸಿ ಪಟ್ಟಾ ನೀಡಲಾಗಿದೆ. ಸಮುದಾಯಗಳಿಂದ ಬಂದಿದ್ದ ದಾವೆಗಳು

71,000. ಆದರೆ ಇದರಲ್ಲಿ 18,000 ಮಾತ್ರ ಸ್ವೀಕರಿಸಲ್ಪಟ್ಟಿವೆ.

ರಾಜ್ಯ ಮಟ್ಟದಲ್ಲಿ, ದಾವೆಗಳ ಸ್ವೀಕಾರದ ದೃಷ್ಟಿಯಿಂದ ಅತ್ಯುತ್ತಮ ಸಾಧನೆಗೈದಿರುವುದು ತ್ರಿಪುರಾದ ಎಡರಂಗ ಸರ್ಕಾರವೇ(ಶೇ. 66), ನಂತರ ಕೇರಳ (ಶೇ. 62) ಮತ್ತು ಒರಿಸ್ಸಾ (ಶೇ. 60 ), ಆದರೆ ಮಧ್ಯಪ್ರದೇಶ (ಶೇ. 37.3), ಜಾರ್ಖಂಡ್ (ಶೇ. 36.4), ಮಹಾರಾಷ್ಟ್ರ (ಶೇ. 29.8), ಆಸ್ಸಾಂ(ಶೇ. 27.5), ಗುಜರಾತ್ (ಶೇ. 22.3), ಮತ್ತು ಪಶ್ಚಿಮ ಬಂಗಾಳ(ಶೇ. 22 ರಷ್ಟು) – ಈ ಎಲ್ಲಾ ರಾಜ್ಯಗಳ ಸಾಧನೆ ರಾಷ್ಟ್ರೀಯ ಸರಾಸರಿಗಿಂತ ಕೆಳಗಿದೆ.

'ಇತರೆ ಪಾರಂಪರಿಕ ಅರಣ್ಯ ನಿವಾಸಿಗಳ' (OTFD's) ವಿಷಯದಲ್ಲಿ ಹಕ್ಕುಗಳನ್ನು ಪಡೆಯಲು, ತಾವು ಮೂರು ತಲೆಮಾರುಗಳಿಂದ ಅಥವಾ 75 ವರ್ಷಗಳಿಂದ ವಾಸವಾಗಿದ್ದೇವೆ ಎಂದು ರುಜುವಾತು ಪಡಿಸಬೇಕಾಗಿರುವುದು ಅತಿದೊಡ್ಡ ಅಡಚಣೆಯಾಗಿದೆ. ಈ OTFD ಗಳಲ್ಲಿ ಹೆಚ್ಚಿನವರು ಬುಡಕಟ್ಟುಗಳಿಗೆ ಸೇರಿದವರು, ಆದರೆ ಅವರನ್ನು ಒಂದಿಲ್ಲೊಂದು ರಾಜ್ಯದಲ್ಲಿ ಪರಿಶಿಷ್ಟರ ಪಟ್ಟಿಯಲ್ಲಿ ಸೇರಿಸಿಲ್ಲ. ಇವರಲ್ಲಿ ಬಹಳಷ್ಟು ಮಂದಿ ಪರಿಶಿಷ್ಟ ಜಾತಿಗಳಿಗೆ ಸೇರಿದವರಾಗಿದ್ದು, ದಲಿತರಾಗಿದ್ದಾರೆ. ಈ ಕಠಿಣ ಮಾನದಂಡದಿಂದಾಗಿ ಬಹುದೊಡ್ಡ ಪ್ರಮಾಣದಲ್ಲಿ ದಾವೆಗಳನ್ನು ತಿರಸ್ಕರಿಸಲಾಗಿದೆ. ಮಧ್ಯಪ್ರದೇಶ ಒಂದೇ ರಾಜ್ಯ OTFD ದಾವೆಗಳಲ್ಲಿ ಶೇ. 96 ದಾವೆಗಳನ್ನು ತಿರಸ್ಕರಿಸಿರುವುದಾಗಿ ವರದಿ ಮಾಡಿದೆ.

**ಲಘು ಅರಣ್ಯ ಉತ್ಪನ್ನಕ್ಕೆ ಹಿಡಿಗಾಸು**

ಅರಣ್ಯಭೂಮಿಯಿಂದ ಒಕ್ಕಲೆಬ್ಬಿಸಿದರೆ, ಮತ್ತು ಸಮುದಾಯಿಕ ಆಸ್ತಿ ಹಕ್ಕುಗಳಿಗೆ ಮಾನ್ಯತೆ ಸಿಗದಿದ್ದರೆ ಹುಲ್ಲುಗಳು, ಬಿದಿರುಗಳು, ಬೀಜಗಳು, ಗಿಡಗಳು, ಬೇರುಗಳು, ಎಲೆಗಳು, ಜೇನು, ಅಂಟು ಮುಂತಾದ ಮರಮಟ್ಟೇತರ 'ಲಘು ಅರಣ್ಯ ಉತ್ಪನ್ನ'(MFP)ಗಳನ್ನು ಸಂಗ್ರಹಿಸುವ ಹಕ್ಕು ಮೊಟಕುಗೊಳ್ಳುತ್ತದೆ. ಯೋಜನಾ ಆಯೋಗ ಅರ್ಧದಷ್ಟು ಆದಿವಾಸಿ ಕುಟುಂಬಗಳು ಈ ಉತ್ಪನ್ನಗಳ ಸಂಗ್ರಹದಲ್ಲಿ ತೊಡಗಿದ್ದಾರೆ ಎನ್ನುತ್ತದೆ. ಪಂಚಾಯತ್ ರಾಜ್ ಇಲಾಖೆಯ ಅಂದಾಜಿನಂತೆ ಶೇ. 20 ರಿಂದ ಶೇ. 40 ರಷ್ಟು ಅರಣ್ಯ ನಿವಾಸಿಗಳ ಆದಾಯ ಈ MFP ಯಿಂದಲೇ ಬರುತ್ತದೆ. ಆದ್ದರಿಂದ ಈ ಉತ್ಪನ್ನಗಳ ಬೆಲೆ ನಿಗದಿಯ ಪ್ರಶ್ನೆ ಆದಿವಾಸಿ ಜನರ ಜೀವನಾಧಾರಕ್ಕೆ ಬಹಳ ಮಹತ್ವದ್ದಾಗುತ್ತದೆ. ಈಗ ವ್ಯಾಪಾರಸ್ಥರ ಮತ್ತು ಮಧ್ಯವರ್ತಿಗಳ ಶೋಷಣೆಯಿಂದಾಗಿ ಅವರು ಅತಿ ಕಡಿಮೆ ಬೆಲೆ ಪಡೆಯುತ್ತಾರೆ. ಅನೇಕ ರಾಜ್ಯಗಳಲ್ಲಿ ಬುಡಕಟ್ಟು ನಿಗಮಗಳು ಸಾಕಷ್ಟು ಹಣದ ಕೊರತೆಯಿಂದ ನಷ್ಟ ಅನುಭವಿಸುತ್ತಿವೆ.

ಅವು ವ್ಯಾಪಾರಿಗಳೊಂದಿಗೆ ಶಾಮೀಲಾಗಿ ಆದಿವಾಸಿಗಳಿಗೆ ಕಡಿಮೆ ಬೆಲೆ ಸಿಗುವಂತೆ ಮಾಡಿರುವ ಉದಾಹರಣೆಗಳೂ ಇವೆ.

**ಹಣದುಬ್ಬರ ಮತ್ತು ಹಸಿವಿನಿಂದಾಗಿ ಅಪೌಷ್ಟಿಕತೆ**

ಬೆಲೆಗಳ ನಿರಂತರ ಹೆಚ್ಚಳವು ಆದಿವಾಸಿ ಜನರ ಆರೋಗ್ಯದ ಮೇಲೆ ವಿನಾಶಕಾರಿಪರಿಣಾಮ ಬೀರಿದೆ. ತುಂಬ ಅಗತ್ಯವಿರುವ ಆಹಾರ ಪದಾರ್ಥಗಳಾದ ಉಪ್ಪು, ಸಕ್ಕರೆ, ಅಡುಗೆ ಎಣ್ಣೆ ಮಂತಾದವುಗಳು ಬಯಲು ಸೀಮೆ ಪ್ರದೇಶಗಳಿಂದ ಆದಿವಾಸಿಗಳು ನೆರೆಸಿರುವ ಬೆಟ್ಟಪ್ರದೇಶಕ್ಕೆ ಬರಬೇಕು ಆದ ಕಾರಣ, ಆದಿವಾಸಿ ಪ್ರದೇಶಗಳಲ್ಲಿ ಹಣದುಬ್ಬರ ಮತ್ತಷ್ಟು ಅಧಿಕವಾಗಿದ್ದು, ಆದಿವಾಸಿಗಳ ಬದುಕನ್ನು ಯಾತನೆಗೆ ದಬ್ಬಿದೆ. ಒಟ್ಟಾರೆಯಾಗಿ ಸುಮಾರು ಶೇ. 88.5 ರಷ್ಟು ಆದಿವಾಸಿಗಳು ಕ್ಯಾಲರಿ ಕೊರತೆಯಿಂದ ನರಳುತ್ತಿದ್ದಾರೆ. ಇದರಿಂದಾಗಿ ಇಲ್ಲಿನ ಜನರ ಅಪೌಷ್ಟಿಕತೆ ಮಟ್ಟವು ಬೇರೆ ಸಾಮಾಜಿಕ ವರ್ಗಗಳ ಜನರಿಗಿಂತ ಶೇ. 15 ರಷ್ಟು ಅಧಿಕವಾಗಿದೆ. ಶೇ. 68.5 ರಷ್ಟು ಆದಿವಾಸಿ ಮಹಿಳೆಯರು ರಕ್ತಹೀನ ಕಾಯಿಲೆಯಿಂದ ಬಳಲುತ್ತಿದ್ದಾರೆ. ಇತರೆ ಸಾಮಾಜಿಕ ವರ್ಗಗಳ ಮಹಿಳೆಯರಲ್ಲಿ ಇದು ಶೇ. 55.3.

**ದೌರ್ಜನ್ಯಗಳಿಗೆ ತಡೆ**

ಕಳೆದ ಮೂರು ವರ್ಷಗಳಲ್ಲಿ ಪರಿಶಿಷ್ಟ ಪಂಗಡಗಳ ವಿರುದ್ಧ ಅಪರಾಧ ಪ್ರಕರಣಗಳು ಸುಮಾರು ಶೇ. 2.9 ರಷ್ಟು ಹೆಚ್ಚಳವಾಗಿದೆ. ಇನ್ನೂಮುಖ್ಯವಾಗಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ(ದೌರ್ಜನ್ಯ ತಡೆ) ಕಾಯಿದೆಯ ಅಡಿಯಲ್ಲಿ ಕಳೆದ ಒಂದೇ ವರ್ಷದಲ್ಲಿ ಶೇ. 13.6 ರಷ್ಟು ಅಪರಾಧ ಪ್ರಕರಣಗಳು ಹೆಚ್ಚಾಗಿವೆ. ಬುಡಕಟ್ಟು ಮಹಿಳೆಯರ ಮೇಲೆ ಗುತ್ತಿಗೆದಾರರಿಂದ, ಅರಣ್ಯ ಸಿಬ್ಬಂದಿಗಳು, ಭೂಮಾಲಿಕರಿಂದ, ಮತ್ತು ಗ್ರಾಮೀಣ ಶ್ರೀಮಂತರಿಂದ ಹಿಂಸಾಚಾರಗಳು ಮತ್ತು ನಗರ ಪ್ರದೇಶದಲ್ಲಿ ಮನೆಗೆಲಸ ಮಾಡುವವವರನ್ನು ಬಲಿಪಶು ಮಾಡುತ್ತಿರುವುದು ಹೆಚ್ಚುತ್ತಿರುವುದಕ್ಕೂ  ಅವರ ಅತ್ಯಂತ ದುರ್ಭರ ಕೆಲಸದ ಪರಿಸ್ಥಿತಿಗಳಿಗೂ ಸಂಬಂಧವಿದೆ.

**ಅಪ್ಪಟ ಆದಿವಾಸಿ ಸಮುದಾಯಗಳ ವಿರುದ್ಧ ತಾರತಮ್ಯ**

ಬೆಚ್ಚಿ ಬೀಳುವಂತ ಸಂಗತಿಯೆಂದರೆ, ರಾಜ್ಯಗಳು, ಒಂದಾದ ಮೇಲೊಂದರಂತೆ ಅಪ್ಪಟ ಬುಡಕಟ್ಟು ಸಮುದಾಯಗಳನ್ನು ಪರಿಶಿಷ್ಟ ಪಂಗಡಗಳ ಪಟ್ಟಿಯಿಂದ ಕಿತ್ತು ಹಾಕುತ್ತಿರುವುದು. ಹಾಗೂ ಅವರನ್ನು ಬುಡಕಟ್ಟು ಜನಾಂಗಗಳಿಗೆ ಸೇರಿದವರೆಂದು

ಮಾನ್ಯತೆ ಮಾಡಲು ನಿರಾಕರಿಸುತ್ತಿರುವುದು. ಆದಾಗ್ಯೂ, ಇದೇ ಸಂದರ್ಭದಲ್ಲಿ ಹಲವರು ಸಂಬಂಧಪಟ್ಟ ಅಧಿಕಾರಿಗಳಿಗೆ ಲಂಚ ಕೊಟ್ಟು 'ಆದಿವಾಸಿ' ಜನಾಂಗದವರೆಂದು ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದು ಆದಿವಾಸಿ ಜನರಿಗೆ ಮಾತ್ರ ತಲುಪಬೇಕಾದ ಎಲ್ಲಾ ಸೌಲಭ್ಯಗಳನ್ನು ಕಾನೂನು ಬಾಹಿರವಾಗಿ ಬಾಚಿಕೊಳ್ಳುತ್ತಿದ್ದಾರೆ. ಇಂತಹ ತಾರತಮ್ಯದ ನೀತಿಗಳಿಂದಾಗಿ ಆದಿವಾಸಿಗಳಿಗೆ ಇರುವ ಸಂವಿಧಾನಾತ್ಮಕ ರಕ್ಷಣೆಗಳನ್ನು ಉಲ್ಲಂಘಿಸಿದಂತಾಗುತ್ತದೆ. ಈ ಹಿನ್ನೆಲೆಯಲ್ಲಿ ಸಿಪಿಐ(ಎಂ) ಅಪ್ಪಟ ಆದಿವಾಸಿ ಸಮುದಾಯಗಳಿಗೆ ಆಗುತ್ತಿರುವ ಅನ್ಯಾಯಗಳನ್ನು ಸರಿಪಡಿಸಲು ಒಂದು ಆಯೋಗ ರಚಿಸಿ ಅದು ನಿರ್ದಿಷ್ಟ ಕಾಲಮಿತಿಯೊಳಗೆ ಈ ಎಲ್ಲ ಪ್ರಶ್ನೆಗಳನ್ನು ಪರಿಶೀಲಿಸಬೇಕು ಎಂದು ಆಗ್ರಹಿಸುತ್ತಿದೆ.

**ಆದಿವಾಸಿ ಜನಗಳಿಗೆ ಸಾಮಾಜಿಕ ಮತ್ತು ಆರ್ಥಿಕ ನ್ಯಾಯ ಒದಗಿಸಬೇಕು ಎಂಬುದು ಸಿಪಿಐ(ಎಂ)ನ ನಿಲುವು. ಅದಕ್ಕಾಗಿ**

- ಎಲ್ಲಾ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು,
- ಭೂಮಿ ಹಕ್ಕುಗಳನ್ನು ರಕ್ಷಿಸಬೇಕು,
- ಪರಭಾರೆ ಮಾಡಿದ ಜಮೀನನ್ನು ಅವರಿಗೆ ಹಿಂದಿರುಗಿಸಬೇಕು,
- ಅರಣ್ಯ ಹಕ್ಕುಗಳ ಕಾಯಿದೆಯನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಬೇಕು,
- ಲಘು ಅರಣ್ಯ ಉತ್ಪನ್ನಗಳಿಗೆ ಕನಿಷ್ಟ ಬೆಂಬಲ ಬೆಲೆ ಕೊಡಬೇಕು,
- 'ಶೆಡ್ಯೂಲ್ ಪ್ರದೇಶಗಳಿಗೆ ಪಂಚಾಯತುಗಳ ವಿಸ್ತರಣೆ' ಕಾನೂನ(PESAA)ನ್ನು ಎಲ್ಲ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಬುಡಕಟ್ಟು ಜನರು ಹೆಚ್ಚಿನ ಸಂಖ್ಯೆಯಲ್ಲಿರುವ ಡೆವಲಪ್‌ಮೆಂಟ್ ಬ್ಲಾಕುಗಳಿಗೆ ವಿಸ್ತರಿಸಬೇಕು,
- ಬುಡಕಟ್ಟು ಭಾಷೆಗಳನ್ನು ರಕ್ಷಿಸುವುದು ಮತ್ತು ಅಭಿವೃದ್ಧಿ ಪಡಿಸುವುದು.
- ಉದ್ಯೋಗ ಮತ್ತು ಆಹಾರ ಭದ್ರತೆ ಒದಗಿಸಬೇಕು
- ಸಾರ್ವಜನಿಕ ಸೇವೆಗಳು ಮತ್ತು ಆರೋಗ್ಯ, ಶಿಕ್ಷಣ, ನೀರು, ಶೌಚಾಲಯ, ನೀರಾವರಿ ಮತ್ತು ವಿದ್ಯುತ್, ಸಂಪರ್ಕ,ರೇಷನ್ ಕಾರ್ಡ್‌ಗಳು ಇತ್ಯಾದಿ ಮೂಲಸೌಕರ್ಯಗಳನ್ನು ವಿಸ್ತರಿಸಬೇಕು.

- ಸಿಪಿಐ(ಎಂ) ಎಲ್ಲಾ ಆದಿವಾಸಿ ಕುಟುಂಬಗಳಿಗೆ ತಿಂಗಳಿಗೆ 35 ಕೆ.ಜಿ. ಆಹಾರ ಧಾನ್ಯಗಳನ್ನು ಕೆ.ಜಿ.ಗೆ 2 ರೂ.ನಂತೆ ಒದಗಿಸಲು ಬದ್ಧವಾಗಿದೆ.

ಬಿಜೆಪಿ ಮತ್ತು ಕಾಂಗ್ರೆಸ್ ಒಂದೇ ತೆರನ ಬುಡಕಟ್ಟು ವಿರೋಧಿ ನೀತಿಗಳನ್ನು ಅನುಸರಿಸುತ್ತಿವೆ.

ಎಡಪಕ್ಷಗಳು ಪ್ರತಿನಿಧಿಸುವ ಆರ್ಥಿಕ ಹಾಗೂ ಭೂಮಿ ನೀತಿಗಳ ಒಂದು ಪರ್ಯಾಯ ಮಾತ್ರ ಆದಿವಾಸಿ ಸಮುದಾಯಗಳ ಹಕ್ಕುಗಳನ್ನು ಸಂರಕ್ಷಿಸಲು ಸಾಧ್ಯ

**ಆದಿವಾಸಿ ಹಕ್ಕುಗಳ ಸಂರಕ್ಷಣೆಗಾಗಿ**

**ಸಿಪಿಐ(ಎಂ)ಗೆ ಮತ ನೀಡಿ– ಎಡಪಕ್ಷಗಳನ್ನು ಬಲಪಡಿಸಿ**

ಅನುವಾದ: **ಎನ್.ನಾಗರಾಜ್**

# ಕಾಂಗ್ರೆಸನ್ನು ತಿರಸ್ಕರಿಸಿ,
# ಬಿಜೆಪಿಯನ್ನು ಸೋಲಿಸಿ
# ಸಿಪಿಐ(ಎಂ)ಗೆ ಮತ ನೀಡಿ

## ಒಂದು ಜಾತ್ಯಾತೀತ ಮತ್ತು
## ಪ್ರಜಾಸತ್ತಾತ್ಮಕ ಪರ್ಯಾಯಕ್ಕಾಗಿ
# ಎಡಪಕ್ಷಗಳನ್ನು ಬಲಪಡಿಸಿ

ಬೆಲೆ : ರೂ. 5.00

ಮೂಲ:
ಸಿಪಿಐ(ಎಂ) ಕೇಂದ್ರ ಸಮಿತಿ, ನವದೆಹಲಿ

ಪ್ರಕಟಣೆ:
ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)
ಕರ್ನಾಟಕ ರಾಜ್ಯ ಸಮಿತಿ
ನಂ. 37/ಎ, 8ನೇ ಅಡ್ಡರಸ್ತೆ, ಮಹಾಲಕ್ಷ್ಮಿ ಲೇಔಟ್, ಬೆಂಗಳೂರು – 560086

ಮುದ್ರಣ: ಕ್ರಿಯಾ, ಎಸ್.ಆರ್. ನಗರ, ಬೆಂಗಳೂರು
ಪ್ರತಿಗಳು: 5,000